ಶ್ರೀ ಜೆ. ಬಸವಣ್ಣಪ್ಪ.—ರೆಗ್ಯುಲರ್ ಕೋಟಾ ಕಳುಹಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಹಿಂದಿನ ಕೋಟ ಕೊಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಚುಕ್ಕೆ ಪ್ರಶ್ನೆ ಸಂಖ್ಯೆ ೫೬೭(೧೫೭೯)

ಸದಸ್ಯರು

ಗೈರುಹಾಜರಿ

ಚುಕ್ಕೆ ಪ್ರಶ್ನೆ ಸಂಖ್ಯೆ ೫೬೧)೧೪೬೨)

ಸದಸ್ಯರು

ಗೈರು ಹಾಜರಿ

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸತಕ್ಕಂತ ಪ್ರಶ್ನೆಗಳು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ. ಒಂದು ಸಣ್ಣ ತಪ್ಪಾಗಿದೆ ಅದನ್ನು ಸರಿಪಡಿಸಿ ಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಎಲ್.ಟಿ. ತಿಮ್ಮಪ್ಪ ಹೆಗಡೆಯವರು ಹಾಕಿದ ಪ್ರಶ್ನೆ ಸಂಖ್ಯೆ ೫೬೫(೧೬೬೬) ಈ ಪ್ರಶ್ನೆಗೆ ಒಂದು ರಿಪೋರ್ಟ್ ಬರಬೇಕಾಗಿದೆ ಎಂದು ಹೇಳಿರುತ್ತೇನೆ. ಇದಂ ನವೆಂಬರ್ ತಿಂಗಳಲ್ಲಿಯೇ ಬಂದಿರುತ್ತದೆ. ಅದರ ಪ್ರತಿಯನ್ನು ಸರ್ಕಾರ ಪರಿಶೀಲನೆ ಮಾಡತಕ್ಕಂಥದು ಇರುತ್ತದೆ. ಇಷ್ಟೇ ಇದರ ಕಿರ್ವಹಪಡಿಯೆಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಲಿಖಿತ ಮೂಲಕ ಉತ್ತರಗಳನ್ನು ಸಭೆಯ ಮುಂದಿಡತಕ್ಕಂಥದ್ದು.

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸತಕ್ಕಂಥದನ್ನು ಸಭೆಯ ಮುಂದಿಡುತ್ತೇನೆ

ಶ್ರೀ ಧನಂಜಯಕುಮಾರ್ — ಮಾನ್ಯ ಸಚಿವರು ನಾವು ಕೇಳಿದ ಪ್ರಶ್ನೆಗೆ ಲಿಖಿತ ಮೂಲಕ ಉತ್ತರವನ್ನು ಕೊಟ್ಟಿರುತ್ತೇವೆಂದು ಹೇಳಿರುತ್ತಾರೆ. ಆದರೆ ಇನ್ನೂ ಉತ್ತರ ನಮಗೆ ಬಂದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ಸಮಯ ಮುಗಿದಿದೆ.

ಲಿಖಿತಮೂಲಕ ನೀಡಲಾದ ಪ್ರಶ್ನೋತ್ತರಗಳ ಪಟ್ಟಿ

ಬಶೆಟ್ಟಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ

೧೫೯. ಶ್ರೀ ವಿ. ವಂಗಿಯಪ್ಪ (ಶಿಡ್ಲಘಟ್ಟ). — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಶಿಡ್ಲಘಟ್ಟ ತಾಲ್ಲೂಕು ಸಾದಲಿ ಮತ್ತು ಬಶೆಟ್ಟಿ ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬಹಳ ಕಾಲದಿಂದ ವೈದ್ಯರು ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಆದಷ್ಟು ಜಾಗ್ರತೆ ಅಲ್ಲಿಗೆ ವೈದ್ಯರುಗಳನ್ನು ನೇಮಿಸಲಾಗುವುದು.

ಕುಂದಾಪುರದ ಗಾಂಧಿ ಮೈದಾನವನ್ನು ದುರಸ್ತಿಗೊಳಿಸುವುದು

ಶ್ರೀ ಪುತಾಪಟಿಂದ್ರಶೆಟ್ಟಿ (ಕುಂದಾಪುರ).—

೧೬೪. ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ.—

ಅ) ಕುಂದಾಪುರ ಗಾಂಧಿ ಮೈದಾನದಲ್ಲಿ ವಾಹನ ಸಂಚಾರ ಬಹಳವಾದ್ದರಿಂದ ಮೈದಾನವ ದುರಸ್ತಿ ಮಾಡಬೇಕೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಅ) ಇದಕ್ಕೆ ಅಡ್ಡಗೋಡೆ ಕಟ್ಟುವ ಯೋಜನೆ ಏನಾದರೂ ಸರಕಾರದವರ ಮುಂದಿದೆಯೆ ?

ಇ) ಹಾಗಿಲ್ಲವಾದ್ದಲ್ಲಿ ದುರಸ್ತಿಗೋಸ್ಕರ ಪುರಸಭೆಯವರಿಗೆ ವಹಿಸಿಕೊಡುವ ಸಾಧ್ಯತೆ ಇದೆಯೆ ?

ಈ) ಹಾಗಿಲ್ಲವಾದಲ್ಲಿ ದುರಸ್ತಿ ಮಾಡುವ ಬಗ್ಗೆ ಸರಕಾರದವರು ಯಾವಾಗ ಕ್ರಮಕೈಗೊಳ್ಳುವರು?

ಸರಕಾರಿ ನೌಕರರಿಗೆ ನಿವೃತ್ತಿ ನಂತರ ೫ ಸೆಂಟು ಜಾಗ ಕೊಡುವುದು.

೧೪೪೩. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಮುಖ್ಯಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ. —

ಅ) ಸ್ವಂತ ಮನೆ ಅಥವಾ ನಿವೇಶನವಿಲ್ಲದ ಸರಕಾರಿ ನೌಕರರಿಗೆ ಅವರು ನಿವೃತ್ತರಾದ ನಂತರ ವಾಸ ಮಾಡಲು ಅನುಕೂಲವಾಗುವಂತೆ ಐದು ಸೆಂಟು ನಿವೇಶನ ಮಂಜೂರ್ಮಾಡುವಂತೆ ಸರಕಾರದವರು ಕಾನೂನು ತಿದ್ದುಪಡಿ ಮಾಡುವರೆ ?

ಆ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರಕಾರದವರು ವ್ಯವಸ್ಥೆಮಾಡುವುದು ಸೂಕ್ತವಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು). —

ಅ) ಇಲ್ಲ.

ಆ) ಸೂಕ್ತತೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಮಂತ್ರಿಗಳ ಪ್ರವಾಸ

ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—

೧೫೬೭. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ೧೯೮೩ನೇ ಇಸವಿಯಲ್ಲಿ ರಾಜ್ಯದ ಸಚಿವರುಗಳು ರಾಜ್ಯದ ಒಳಗೆ ಮತ್ತು ಹೊರಗೆ ಮಾಡಿರುವ ಪ್ರವಾಸದ ಸಂಖ್ಯೆ ಹಾಗೂ ಅವಧಿ ಎಷ್ಟು ? (ವಿವರವಾದ ಮಾಹಿತಿಯನ್ನೊದಗಿಸುವುದು) ?

ಆ) ಈ ಪ್ರವಾಸಿಗಳಿಗೆ ಆಗಿರುವ ವೆಚ್ಚವೆಷ್ಟು (ಖಾತಾವಾರು ವಿವರ ನೀಡುವುದು) ?

ಆರಕ್ಷಕ ಠಾಣೆಗಳಲ್ಲಿ ಹುದ್ದೆಗಳನ್ನು ಜಾಸ್ತಿ ಮಾಡುವುದು.

೧೫೬೮ ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಮುಖ್ಯಮಂತ್ರಿಯವರು ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದ ಪೋಲೀಸ್ ಠಾಣೆಗಳಲ್ಲಿರುವ ಹುದ್ದೆಗಳ ಸಂಖ್ಯೆ ೧೯೫೬ರಲ್ಲಿ ಮಂಜೂರಾಗಿದ್ದ ಹುದ್ದೆಗಳ ಸಂಖ್ಯೆಗಿಂತ ಹೆಚ್ಚಾಗಿಲ್ಲದಿರುವುದು ನಿಜವೆ, ಹಾಗಿದ್ದಲ್ಲಿ ಇಲ್ಲಿಯವರೆಗೆ ಸದರಿ ಹುದ್ದೆಗಳ ಸಂಖ್ಯೆ ಬದಲಾವಣೆಯಾಗದಿರಲು ಕಾರಣಗಳೇನು ?

ಆ) ಸದ್ಯದ ಪರಿಸ್ಥಿತಿಯಲ್ಲಿ ಹಾಲಿ ಠಾಣೆಗಳಲ್ಲಿರುವ ಪೋಲೀಸರ ಸಂಖ್ಯೆ ಕಡಿಮೆ ಎಂಬುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಹೆಚ್ಚು ಮಾಡುವ ಆಲೋಚನೆ ಸರ್ಕಾರದ ಗಮನದಲ್ಲಿದೆಯೆ ?

ಈ) ಹಾಗಿದ್ದಲ್ಲಿ ಯಾವಾಗ ಹೆಚ್ಚು ಮಾಡಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಯವರು). —

ಅ) ರಾಜ್ಯದ ಪೋಲೀಸ್ ಠಾಣೆಗಳಲ್ಲಿ ೧೯೫೬ರಲ್ಲಿ ಮಂಜೂರಾಗಿದ್ದ ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ ಎನ್ನುವುದು ಸರಿಯಾಗಿಲ್ಲ. ೧೯೫೬ರಲ್ಲಿ ಒಟ್ಟು ಹುದ್ದೆಗಳು ೨೪,೧೮೯, ಆದರೆ ಈಗ ಈ ಸಂಖ್ಯೆ ೪೨,೧೦೩ ಆಗಿದೆ.

ಆ) ಎಲ್ಲಾ ಪೋಲೀಸ್ ಠಾಣೆಗಳಲ್ಲಿ ಪೋಲೀಸರ ಸಂಖ್ಯೆ ಕಡಿಮೆ ಎನ್ನುವುದು ನಿಜವಲ್ಲ, ಕೆಲವೊಂದು ಠಾಣೆಗಳಲ್ಲಿ ಸ್ವಲ್ಪ ಕಡಿಮೆ ಸಿಬ್ಬಂದಿ ಇರಬಹುದು.